**ಒ.ಎಸ್.ನಂಬ್ರಃ 118/2015 ಪಿ .ಡಬ್ಲ್ಯೂ ಃ 1**

ದಿನಾಂಕಃ 26-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ. ಎನ್.ಎಸ್.ಆರ್.ಬಿ ವಕೀಲರಿಂದ**

1 ಮಡಮಕ್ಕಿ ಗ್ರಾಮದ ಸರ್ವೇ ನಂಬರ್ 86/1 ಬಿ ರ ಒಟ್ಟು ವಿಸ್ತೀರ್ಣ 7 ಎಕ್ರೆ 17 ಸೆಂಟ್ಸ್ ಇರುತ್ತದೆ. ಅದೇ ವಿಸ್ತೀರ್ಣದ ಸ್ಥಳಕ್ಕೆ ನಾನು ಈ ದಾವೆ ಸಲ್ಲಿಸಿರುತ್ತೇನೆ. ನಿಪಿ1 ರ ಪಹಣಿಯಂತೆ 6 ಎಕ್ರೆ 51 ಸೆಂಟ್ಸ್ ಗೆ ನನ್ನ ಹಾಗೂ ಕುಟುಂಬದ ಸದಸ್ಯರ ಹೆಸರು ಸರ್ವೇ ನಂಬರ್ 86/1 ಬಿ ರಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ಅದು ತಿದ್ದುಪಡಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಎಂ.ಆರ್ 25/1983-84 ರಂತೆ ಪಹಣಿ ಪತ್ರಿಕೆ ತಿದ್ದುಪಡಿಯಾಗಿರುತ್ತದೆ. ಎಂ.ಆರ್ 25/1983-84 ರ ಮ್ಯೂಟೇಶನ್ ನಂತೆ ಉಳಿಕೆ ಜಾಗ ಶೇಶಿ ಹಾಂಡ್ತಿ ರವರ ಹೆಸರಿಗೆ ನಮೂದಾಗಿರುತ್ತದೆ . ಯಾವ ಆದಾರದ ಮೇಲೆ ಶೇಶಿ ಹಾಂಡ್ತಿ ರವರ ಹೆಸರು ನಮೂದಾಗಿರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ .

2. ಸರ್ವೇ ನಂ 86/1 ರಲ್ಲಿ 66 ಸೆಂಟ್ಸ್ ಶೇಶಿ ಹಾಂಡ್ತಿ ಹೆಸರಿನಲ್ಲಿ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಸರ್ವೇ ನಂ.81/1 ರಲ್ಲಿ ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ನಾನು ಈ ನ್ಯಾಯಲಯದಲ್ಲಿ ದಾಖಲಿಸುವ ಪೂರ್ವದಲ್ಲಿ ಎ.ಸಿ ನ್ಯಾಯಲಯದಲ್ಲಿ ಮ್ಯೂಟೇಶನ್ ಪ್ರಶ್ನಿಸಿ ಆರ್ ಆರ್ ಟಿ 1 ಎಸ್ ಆರ್ 25/2014-15 ರಂತೆ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ . ಸದರಿ ಮೇಲ್ಮನವಿಯನ್ನು ಸರ್ವೇ 86/1 ರಲ್ಲಿ ನ ಒಟ್ಟು 7 ಎಕ್ರೆ 17 ಸೆಂಟ್ಸ್ ನನ್ನ ಹೆಸರಿಗೆ ಮಾಡಿಕೊಡಬೇಕು ಅಂತ ಕೇಳಿರುತ್ತೇನೆ ಎಂದರೆ ಸರಿ . ಎಸಿ ನ್ಯಾಯಲಯದಲ್ಲಿ ಅದ ಆದೇಶದ ಬಗ್ಗೆ ನನಗೆ ಗೊತ್ತಿರುತ್ತದೆ .

3. ಸಾಕ್ಷಿಗೆ ಈಗ ಸದರಿ ಉಪವಿಭಾಗ ಅಧಿಕಾರಿಗಳ ಆದೇಶದ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ದಾಖಲೆ ನೋಡಿ ಉಪವಿಭಾಗ ಅಧಿಕಾರಿಗಳ ಆದೇಶ ನೋಡಿ ಓದಿ ಒಪ್ಪಿಕೊಂಡ ಮೇರೆಗೆ ನಿಡಿ1 ಎಂದು ಗುರುತಿಸಲಾಯಿತು . ನಾನು ಸಲ್ಲಿಸಿದ್ದ ಮೇಲ್ಮನವಿ ವಜಾ ಅಯಿತು ಎಂದರೆ ಸರಿ. ಉಪವಿಭಾಗ ಅಧಿಕಾರಿಗಳ ಆದೇಶದ ವಿರುದ್ದ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ಸಾಕ್ಷಿ ನಾನು ಸಲ್ಲಿಸಿದ ಮೇಲ್ಮನವಿ ನನ್ನ ಕಡೆ ಆಗಿರುತ್ತದೆ ಎಂದು ನುಡಿಯುತ್ತಾರೆ. 7 ಎಕ್ರೆ 17 ಸೆಂಟ್ಸ್ ಗೆ ನಮ್ಮ ಹೆಸರು ಇರುವ ಪಹಣಿ ಪತ್ರಿಕೆಯನ್ನು ನಾನು ನ್ಯಾಯಲಯಕ್ಕೆ ಸಲ್ಲಿಸಿರುತ್ತೇನೆ .

4. ಉಳಿಕೆ 33 ಸೆಂಟ್‌ಸ್ ನನ್ನ ಹೆಸರಿನಲ್ಲಿ ಇರುವ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದೇ ಇರಲು ಕಾರಣ ಇದೆಯಾ ಎಂದರೆ ಸಾಕ್ಷಿ ಮಂಜುರಾದ ಆದೇಶದಂತೆ ನಾವು ದಾಖಲೆಯನ್ನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ . ನಾನು ಹೇಳಿದ ಆದೇಶ ಎಂದರೆ ಭೂ ನ್ಯಾಯ ಮಂಡಳಿ ಆದೇಶವಾಗಿರುತ್ತದೆ . ಅದು ಭೂ ನ್ಯಾಯ ಮಂಡಳಿ ಆದೇಶ ಎಂದರೆ ಅದು ಶೇಶಿ ಹಾಂಡ್ತಿ ರವರ ಹೆಸರಲ್ಲಿ ಆದ ಆದೇಶ. ಸರ್ವೇ ನಂ. 86/1 ಬಿಪಿ3 ಯ 33 ಸೆಂಟ್ಸ್ ಮಂಜು ಹಾಂಡಾ ಬಿನ್ ಶೇಶಿ ಹಾಂಡ್ತಿ ರವರ ಹೆಸರಿನಲ್ಲಿ ಇರುವುದನ್ನು ನಾನು ಒಪ್ಪುತ್ತೇನೆ. ಸಾಕ್ಷಿ ತಪ್ಪಾಗಿ ನಮೂದಾಗಿರುತ್ತದೆ ಅಂತ ನುಡಿಯುತ್ತಾರೆ. ಶೇಶಿಹಾಂಡ್ತಿರವರ ಹೆಸರಿನಲ್ಲಿ ಭೂ ಮಂಜೂರಾತಿಯಿಂದ ಆಗಿರುವ ಆದೇಶವನ್ನು ನಾನು ಒಪ್ಪುತ್ತೇನೆ .

5. ಶೇಶಿ ಹಾಂಡ್ತಿರವರ ಹೆಸರಿನಲ್ಲಿ ಮಂಜುರಾದ ಭೂಮಿಯ ಆದೇಶಕ್ಕೆ ಸಂಬಂಧಪಟ್ಟಂತೆ ಸದರಿ ಮಂಜೂರಾತಿ ಆದೇಶವನ್ನು ಯಾವುದೇ ನ್ಯಾಯಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ . ಸಾಕ್ಷಿಗೆ ಈ ದಾಖಲೆ ತೋರಿಸಿ ಅದು ಶೇಶಿ ಹಾಂಡ್ತಿ ರವರ ಹೆಸರಿಗೆ ಮಂಜುರಾದ ದಾಖಲೆ ಪ್ರತಿ ಎಂದರೆ ಸಾಕ್ಷಿ ಅದನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿಶಾನೆ ಡಿ 2 ಅಂತ ಗುರುತಿಸಲಾಯಿತು. (ಸದರಿ ದಾಖಲೆ ನಕಲು ಪ್ರತಿಯಾಗಿದ್ದು ಸಾಕ್ಷಿ ಒಪ್ಪಿಕೊಂಡ ಮೇರೆಗೆ ಗುರುತಿಸಲಾಯಿತು) . ನಿಶಾನೆ ಪಿ 2 ರ ದಾಖಲೆಯಂತೆ ತಹಶೀಲ್ದಾರ್ ರವರು ಶೇಶಿ ಹಾಂಡ್ತಿ ರವರಿಗೆ ಫಾರಂ ನಂ 10 ರಲ್ಲಿ ಪಟ್ಟೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸ ದರಿ ದಾಖಲೆಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿಶಾನೆ ಡಿ 3 ಅಂತ ಗುರುತಿಸಲಾಯಿತು.( ನಿಡಿ 3 ನಕಲು ಪ್ರತಿಯಾಗಿರುತ್ತದೆ ).

6. ಶೇಶಿ ಹಾಂಡ್ತಿ ರವರ ಹೆಸರಿನಲ್ಲಿ ಮಂಜೂರಾದ ನಂತರ 04-10-1989 ರಲ್ಲಿ ನೊಂದಾಯಿತ ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿ . ನೊಂದಾಯಿತ ವಿಭಾಗ ಪತ್ರದಂತೆ ಸರ್ವೇ ನಂ 86/1 ಬಿಪಿ 3 ರಲ್ಲಿ 33 ಸೆಂಟ್ಸ್ ಜಾಗ ಮಂಜ ಹಾಂಡಾ ಬಿನ್ ಶೇಶಿ ಹಾಂಡ್ತಿರವರ ಹೆಸರಿಗೆ ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ನೊಂದಾಯಿತ ಪತ್ರದಂತೆ ಆಗಿರುತ್ತದೆ ಎಂದು ನುಡಿದಿದ್ದು ಸದರಿ ದಾಖಲೆಯನ್ನು ನಿಶಾನೆ-ಡಿ4 ಅಂತ ಗುರುತಿಸಲಾಯಿತು.ಸದರಿ ವಿಭಾಗಪತ್ರವನ್ನು ನಾನು ಇಲ್ಲಿಯವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ . ಶೇಶಿ ಹಾಂಡ್ತಿ ರವರಿಗೆ ಮಂಜೂರು ಆದ 66 ಸೆಂಟ್ಸ್ ಜಾಗ ನಮ್ಮ ಆಸ್ತಿ 6.17 ಜಮೀನಿನ ಪೂರ್ವ ದಿಕ್ಕಿನಲ್ಲಿ ಇರುತ್ತದೆ .

7. ಅವರ ಸ್ಥಳಕ್ಕೆ ಅವರು ಗಡಿ ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿ 7.17 ಎಕ್ರೆ ಗೆ ಗಡಿ ಇರುತ್ತದೆ ಎಂದು ನುಡಿಯುತ್ತಾರೆ . ಸರ್ವೇ ನಂ 86/1 ಬಿ ರಲ್ಲಿ 66 ಸೆಂಟ್ಸ ಜಾಗ ಶೇಶಿ ಹಾಂಡ್ತಿರವರ ಹೆಸರಿಗೆ ಮಂಜೂರು ಆಗಿ ವಿಭಾಗ ಪತ್ರದಂತೆ ನೊಂದಣಿ ಆಗಿ ಸದರಿ ಶೇಶಿ ಹಾಂಡ್ತಿರವರೇ

ಹಕ್ಕು ಸ್ವಾಧೀನದಲ್ಲಿದ್ದು ಆ ಸ್ವತ್ತಿಗೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಹಕ್ಕು ಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ಏನಾದರೂ ಮಾಡಿ ಈ 66 ಸೆಂಟ್ಸ್ ಜಾಗವನ್ನು ಕಬಳಿಸಿಬೇಕು ಎಂಬ ಕಾರಣದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ಶೇಶಿ ಹಾಂಡ್ತಿ ಗೆ ಮಂಜೂರು ಆದ ಜಾಗ ನಮ್ಮ 6 .51 ಎಕ್ರೆ ಜಮೀನಿನ ಉತ್ತರಕ್ಕೆ ಇರುತ್ತದೆ ಎಂದರೆ ಸಾಕ್ಷಿ ಸುಮ್ಮನಿದ್ದು ತದನಂತರ ಸಾಕ್ಷಿ ಹೋಗಿ ನೋಡಬೇಕು ಎಂದು ನುಡಿಯುತ್ತಾರೆ . ಶೇಶಿ ಹಾಂಡ್ತಿ ರವರು ಅವರಿಗೆ ಮಂಜೂರಾದ 66 ಸೆಂಟ್ಸ್ ಜಾಗ ಹೊರತುಪಡಿಸಿ ಬೇರೆ ಯಾವುದನ್ನು ಅತಿಕ್ರಮಣ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**